BOSE Communications

BRIGADE

| Publication | Vijay Karnataka |
| --- | --- |
| Date | 13 Feb 2021 |

# ರವಿಶಂಕರ್ ಶತಮಾನೋತ್ಸವ

**ಪದ್ಮಾ ಶಿವಮೊಗ್ಗ**
padmavathi.v@timesgroup.com


ಪ್ರವೀಣ್


ಅನುಪಮಾ


ಸಂಗೀತಾ ಕಟ್ಟಿ

ಸಿತಾರ್ ಮಾಂತ್ರಿಕ ಪಂಡಿತ್ ರವಿಶಂಕರ್ ಅವರಿಗೆ ಗೌರವ ಸಲ್ಲಿಸುವ ಸಲುವಾಗಿ ರಾಜ್ಯದ ಜನಪ್ರಿಯ ಸಂಗೀತಗಾರರು ಒಂದೆಡೆ ಸೇರಲಿದ್ದಾರೆ. ಪಂಡಿತ್ ರವಿಶಂಕರ್ ಶತಮಾನೋತ್ಸವಕ್ಕಾಗಿ ವಿಶೇಷ ಕಾರ್ಯಕ್ರಮವನ್ನು ಇಂಡಿಯನ್ ಮ್ಯೂಸಿಕ್ ಎಕ್ಸ್‌ಪಿರಿಯನ್ ಮ್ಯೂಸಿಯಂ (ಐಎಂಇ) ಆಯೋಜಿಸಿದ್ದು, 'ರವಿ ನಮನ' ಹೆಸರಿನಲ್ಲಿ ನಡೆಯಲಿದೆ. ರವಿಶಂಕರ್ @100; ಭಾರತದ ಜಾಗತಿಕ ಸಂಗೀತಗಾರ' ಎಂಬ ಟ್ಯಾಗ್‌ಲೈನ್‌ನೊಂದಿಗೆ ನಡೆಯಲಿರುವ ಕಾರ್ಯಕ್ರಮ ದಲ್ಲಿ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ, ಗಾಯಕಿ ಸಂಗೀತಾ ಕಟ್ಟಿ ಮತ್ತು ಸಿತಾರ್ ವಾದಕರಾದ ಅನುಪಮಾ ಭಾಗವತ್ ಈ ಕಾರ್ಯಕ್ರಮ ನೀಡಲಿದ್ದಾರೆ. ಪಂಡಿತ್ ರವಿಶಂಕರ್ ಸೃಷ್ಟಿಸಿರುವ ಜನಪ್ರಿಯ ರಾಗ ಮತ್ತು ಸಂಯೋಜನೆಗಳನ್ನು ಇವರು ನುಡಿಸಲಿದ್ದಾರೆ. ಬೆಂಗಳೂರಿನ ಜೆಪಿ ನಗರದಲ್ಲಿ ಇರುವ ಐಎಂಇನ ಓಪನ್ ಏರ್ ಸೌಂಡ್ ಉದ್ಯಾನವನದಲ್ಲಿ ಇದೇ ತಿಂಗಳು 21ರಂದು ಕಾರ್ಯಕ್ರಮ ಸಂಜೆ 5.30 ರಿಂದ ರಾತ್ರಿ 9ರವರೆಗೆ ನಡೆಯಲಿದೆ.


ಪಂಡಿತ್ ರವಿಶಂಕರ್

**ವಾದ್ಯಗಳ ಪ್ರದರ್ಶನ:** ಪಂಡಿತ್ ರವಿಶಂಕರ್ ಬಳಸುತ್ತಿದ್ದ ಸಂಗೀತ ವಾದ್ಯಗಳು, ಗ್ರ್ಯಾಮಿ ಅವಾರ್ಡ್, ಭಾರತ ರತ್ನ ಪ್ರಶಸ್ತಿ, ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ, ಪೋಲಾರ್ ಮ್ಯೂಸಿಕ್ ಪ್ರೈಜ್, ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಮತ್ತಿತರ ವಸ್ತುಗಳ ಪ್ರದರ್ಶನವನ್ನೂ ಕಳೆದ ಒಂದು ವರ್ಷದಿಂದ ಇಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಇದೀಗ ಪ್ರದರ್ಶನ ಈ ಕಾರ್ಯಕ್ರಮದೊಂದಿಗೆ ಕೊನೆಗೊಳ್ಳಲಿದೆ. ರವಿಶಂಕರ್ ಅವರು ಬಳಸುತ್ತಿದ್ದ ಮೂರು ವಾದ್ಯಗಳನ್ನು ಐಎಂಇನ ಮ್ಯೂಸಿಯಂಗೆ ದಾನವಾಗಿ ನೀಡಲಾಗಿದೆ ಎಂದಿದ್ದಾರೆ ಐಎಂಇನ ಸಂಗ್ರಹಾಲಯ ನಿರ್ದೇಶಕರಾಗಿರುವ ಮಾನಸಿ ಪ್ರಸಾದ್. ಇದೇ ಸಂದರ್ಭದಲ್ಲಿ ಲಿಸನಿಂಗ್ ಸ್ಟೇಷನ್‌ಗಳು ಮತ್ತು ಸಂವಾದ ಕಾರ್ಯಕ್ರಮವನ್ನು ಕೇಳಲು ವ್ಯವಸ್ಥೆ ಮಾಡಲಾಗಿದೆ. ಇದು ರವಿಶಂಕರ್ ಅವರ ಜೀವನ ಮತ್ತು ಸಾಧನೆಯನ್ನು ಒಳಗೊಂಡಿದೆ. ಗ್ರಾಮ್ಮಿ ಪ್ರಶಸ್ತಿ ವಿಜೇತ ರಿಕಿ ಕೇಜ್‌ಅವರ ಧ್ವನಿ ವಿನ್ಯಾಸವಿರುವ 'ಎಕ್ಸ್‌ಪಿರಿಯನ್ಸ್ ಝೋನ್' ಈ ಪ್ರದರ್ಶನದ ವಿಶೇಷವಾಗಿದೆ. ಒಂದು ವರ್ಷ ಕಾಲ ನಡೆದ ಪ್ರದರ್ಶನದ ಪರಂಪರೆಯಾಗಿ ರವಿಶಂಕರ್ ಕುರಿತ ಆನ್‌ಲೈನ್ ಪ್ರದರ್ಶನ ಸದ್ಯದಲ್ಲೇ ಅನಾವರಣಗೊಳ್ಳಲಿದೆ. ■